# ಪುಸ್ತಕ ಪರಿಚಯ

## Hinduism – A Panoramic View

ಲೇಖಕರು : ಸ್ವಾಮಿ ಹರ್ಷಾನಂದ

ಪ್ರಕಾಶಕ: ರಾಮಕೃಷ್ಣ ಮಠ, ಬೆಂಗಳೂರು ೫೭೦ ೦೧೯

ಪುಟ :೪೦ ಬೆಲೆ : ೧೦/-

ಭಾರತೀಯರೆಲ್ಲರೂ ಹಿಂದೂ ಧರ್ಮದ ಸಾರವನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಬೆಂಗಳೂರಿನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜೀಯವರು ಹಿಂದೂಧರ್ಮದ ಪಕ್ಷಿನೋಟ ಕೊಡುವ ಒಂದು ಕಿರುಹೊತ್ತಗೆಯನ್ನು ಪ್ರಕಟಿಸಿದ್ದಾರೆ.

ಹಿಂದೂದೇಶದ ಸಂಸ್ಕೃತಿ, ತತ್ತ್ವಶಾಸ್ತ್ರ, ಧರ್ಮ, ಸಮಾಜ, ಜೀವನಪದ್ಧತಿ ಮತ್ತು ಈ ಧರ್ಮದ ವಿಶೇಷತೆಯನ್ನು ಹಾಗೂ ಅದರ ಸಾರವನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ಜನಸಾಮಾನ್ಯರು ತಿಳಿಯುವಂತೆ ವಿವರಿಸಿದ್ದಾರೆ.ಪ್ರಸ್ತುತ ಪರಿಸ್ಥಿತಿಯಲ್ಲಿ ಹಿಂದೂಧರ್ಮದ ಸಮಸ್ಯೆಗಳು, ತೊಡಕುಗಳನ್ನು ವಿಚಾರಿಸಿ, ವಿಶ್ಲೇಷಿಸಿ ಅದಕ್ಕೆ ಸೂಕ್ತವಾದ ಪರಿಹಾರಗಳ ಸೂಚನೆ ಈ ಕಿರುಹೊತ್ತಗೆಯಲ್ಲಿದೆ.

ಅತ್ಯಂತ ಕಡಮೆ ಸಮಯದಲ್ಲಿ ಹಿಂದೂಧರ್ಮದ ಮುಖ್ಯ ಆಯಾಮಗಳನ್ನು ತಿಳಿಯಲು ಇದೊಂದು ಸುಲಭಸಾಧನ ಮತ್ತು ಸಫಲ ಪ್ರಯತ್ನ ಎನ್ನಬಹುದು. ಸ್ವಾಮಿ ಹರ್ಷಾನಂದಜೀಯವರು ಭಾರತೀಯ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿದವರು. ಅವರು ತಮ್ಮ ಅನೇಕ ಕೃತಿಗಳ ಮೂಲಕ ನಮ್ಮ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಜೀವನದ ಬಗ್ಗೆ ತಮ್ಮ ವಿಚಾರಗಳನ್ನು ಸಮರ್ಥವಾಗಿ ಜನರಿಗೆ ತಿಳಿಸಿದ್ದಾರೆ.

ಆಕರ್ಷಕ ಮುಖಪುಟವಿರುವ ಒಂದು ಸಂಗ್ರಹಯೋಗ್ಯವಾದ ಕಿರುಹೊತ್ತಗೆ ಇದು.

—ಸ್ವಾಮಿ ಮುಕ್ತಿದಾನಂದ

## ಕಲ್ಯಾಣದ ಹಾದಿ

ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ

ಅಭಿನಂದನ ಗ್ರಂಥ

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ,

ಪ್ರಕಾಶಕ: ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,

ಡಂಬಳ-ಗದಗ ೫೮೨ ೧೦೧, ಪುಟ: ೬೫೫, ಬೆಲೆ:೫೦೦/

ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಗದಗ-ಡಂಬಳದ ತೋಂಟದಾರ್ಯ ಮಠದ ಪೀಠಕ್ಕೆ ಬಂದು ಇಪ್ಪತ್ತೈದು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಹೊರತಂದ ಪಟ್ಟಾಧಿಕಾರ ರಜತ ಮಹೋತ್ಸವ ಅಭಿನಂದನ ಗ್ರಂಥವೇ 'ಕಲ್ಯಾಣದ ಹಾದಿ'. ಶಿವಶರಣರ ಆಧ್ಯಾತ್ಮಿಕ ಕಾರ್ಯಕ್ಷೇತ್ರವಾಗಿದ್ದ ಕಲ್ಯಾಣವನ್ನು ಹಾಗೂ ಸಮಾಜಸೇವೆ—ಎರಡನ್ನೂ ಧ್ವನಿಸುವ ಅರ್ಥವತ್ತಾದ ಹೆಸರನ್ನು ಈ ಗ್ರಂಥಕ್ಕೆ ಕೊಡಲಾಗಿದೆ. ಈ ಎರಡೂ ದಿಕ್ಕಿನಲ್ಲಿ—ಅಂದರೆ ಆಧ್ಯಾತ್ಮಿಕ ಹಾಗೂ ಸಮಾಜಸೇವೆಯ ಕಾರ್ಯದಲ್ಲಿ ದುಡಿ ಯುತ್ತಿರುವ ಕರ್ನಾಟಕದ ಅನೇಕ ಮಠಗಳಲ್ಲಿ ಆಯ್ದ ಇಪ್ಪತ್ತೈದು ಮಠಗಳ ಪರಿಚಯ, ಪರಂಪರೆ, ಸಾಧನೆ ಇತ್ಯಾದಿ ವಿವರಗಳಿರುವ ಲೇಖನಗಳು ಈ ಕೃತಿಯ ಪ್ರಧಾನ ಭಾಗ.

ಗ್ರಂಥದ ಎರಡನೇ ಭಾಗದಲ್ಲಿ ತೋಂಟದ ಮಠದ ಬಗೆಗೆ ಹಲವು ಮಾಹಿತಿಗಳಿರುವ ಲೇಖನಗಳಿವೆ. ಮಠದ ನಾನಾ ಚಟುವಟಿಕೆಗಳೊಂದಿಗೆ ಹಿಂದಿನ ಜಗದ್ಗುರುಗಳ ಚರಿತ್ರೆಯೂ ದಾಖಲಿಸಲ್ಪಟ್ಟಿದೆ. ಇತರ ಮಠಗಳ ಕುರಿತ ಲೇಖನಗಳಿಗೇ ಗ್ರಂಥದ ಬಹು ಭಾಗವನ್ನು ಮೀಸಲಿಟ್ಟಿರುವುದು ಈ ಗ್ರಂಥ ಪ್ರಕಟಣೆಯ ಹಿಂದಿನ ವ್ಯಾಪಕ ಉದ್ದೇಶವನ್ನು ವ್ಯಕ್ತಪಡಿಸುತ್ತದೆ.

'ಕಲ್ಯಾಣದ ಹಾದಿ' ಗ್ರಂಥದಲ್ಲಿ ಕೆಲವು ಮಠಗಳ ಛಾಯಾ ಚಿತ್ರಗಳನ್ನು ಕೊಡಲಾಗಿದೆ. ಕೃತಿಯ ಗಾತ್ರವೂ ದೊಡ್ಡದು, ಇಲ್ಲಿನ ವಿಷಯವ್ಯಾಪ್ತಿಯೂ ಹಿರಿದು. ಒಟ್ಟಿನಲ್ಲಿ ಸಂಗ್ರಹಯೋಗ್ಯವಾದ ಆಕರಗ್ರಂಥವಿದು.

—ಬ್ರ.ನಾರಾಯಣ

### ಆಶ್ರಮದ ವಿಶೇಷ ಕಾರ್ಯಕ್ರಮಗಳು

ಮಾರ್ಚ್

| | | |
|---|---|---|
| 4 | ಶನಿವಾರ | ಮಹಾಶಿವರಾತ್ರಿ |
| 8 | ಬುಧವಾರ | ಶ್ರೀ ರಾಮಕೃಷ್ಣ ಜಯಂತಿ |
| 11 | ಶನಿವಾರ | ಆಧ್ಯಾತ್ಮಿಕ ಶಿಬಿರ |
| 12-19 | | ವಾರ್ಷಿಕೋತ್ಸವ |
| 20 | ಸೋಮವಾರ | ಶ್ರೀಚೈತನ್ಯ ಜಯಂತಿ |
| 24 | ಶುಕ್ರವಾರ | ಸ್ವಾಮಿ ಯೋಗಾನಂದ ಜಯಂತಿ |

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ